**24/09/24** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ- ನೀವು ಎಷ್ಟು ಸಮಯ ತಂದೆಯ ನೆನಪಿನಲ್ಲಿರುತ್ತೀರೋ ಅಷ್ಟು ಸಮಯ ಸಂಪಾದನೆಯೇ ಸಂಪಾದನೆಯಿದೆ. ನೆನಪಿನಿಂದಲೇ ನೀವು ತಂದೆಯ ಸಮೀಪ ಬರುತ್ತಾ ಹೋಗುತ್ತೀರಿ."

ಪ್ರಶ್ನೆ: ಯಾವ ಮಕ್ಕಳು ನೆನಪಿನಲ್ಲಿರುವುದಿಲ್ಲವೋ ಅವರಿಗೆ ಯಾವ ಮಾತಿನಲ್ಲಿ ಸಂಕೋಚವಾಗುತ್ತದೆ?

ಉತ್ತರ: ತಮ್ಮ ಚಾರ್ಟನ್ನಿಡುವುದು ಅವರಿಗೆ ನಾಚಿಕೆ ಆಗುತ್ತದೆ. ನಾವು ಸತ್ಯವನ್ನು ಬರೆದರೆ ತಂದೆಯು ಏನು ಹೇಳುವರೋ ಎಂದು ತಿಳಿಯುತ್ತಾರೆ. ಆದರೆ ಸತ್ಯ-ಸತ್ಯವಾದ ಚಾರ್ಟನ್ನು ಬರೆಯುವುದರಲ್ಲಿಯೇ ಮಕ್ಕಳ ಕಲ್ಯಾಣವಿದೆ. ಚಾರ್ಟ್ ಬರೆಯುವುದರಲ್ಲಿ ಬಹಳ ಲಾಭವಿದೆ. ಆದ್ದರಿಂದ ತಂದೆಯು ತಿಳಿಸುತ್ತಾರೆ. ಮಕ್ಕಳೇ ಇದರಲ್ಲಿ ಸಂಕೋಚಪಡಬೇಡಿ.

ಓಂ ಶಾಂತಿ. ಆತ್ಮಿಕ ತಂದೆಯು ಆತ್ಮಿಕ ಮಕ್ಕಳಿಗೆ ತಿಳಿಸುತ್ತಾರೆ - ಈಗ ನೀವು ಮಕ್ಕಳು 15 ನಿಮಿಷಕ್ಕೆ ಮೊದಲೇ ಬಂದು ಇಲ್ಲಿ ತಂದೆಯ ನೆನಪಿನಲ್ಲಿ ಕುಳಿತಿದ್ದೀರಿ. ಈಗ ಮತ್ತ್ಯಾವುದೇ ಕೆಲಸವಂತೂ ಇಲ್ಲ. ತಂದೆಯ ನೆನಪಿನಲ್ಲಿಯೇ ಬಂದು ಕುಳಿತುಕೊಳ್ಳುತ್ತೀರಿ. ಭಕ್ತಿಮಾರ್ಗದಲ್ಲಂತೂ ತಂದೆಯ ಪರಿಚಯವಿರುವುದಿಲ್ಲ. ಇಲ್ಲಿ ತಂದೆಯ ಪರಿಚಯ ಸಿಕ್ಕಿದೆ ಮತ್ತು ತಂದೆಯು ತಿಳಿಸುತ್ತಾರೆ. ನನ್ನೊಬ್ಬನನ್ನೇ ನೆನಪು ಮಾಡಿ, ನಾನಂತೂ ಎಲ್ಲಾ ಮಕ್ಕಳ ತಂದೆಯಾಗಿದ್ದೇನೆ. ತಂದೆಯನ್ನು ನೆನಪು ಮಾಡುವುದರಿಂದ ಆಸ್ತಿಯು ತಾನಾಗಿಯೇ ನೆನಪು ಬರಬೇಕು. ನೀವು ಚಿಕ್ಕಮಕ್ಕಳಂತೂ ಅಲ್ಲ ಅಲ್ಲವೇ? ಭಲೆ ನಾನು 5 ತಿಂಗಳಿನ ಮಗು ಅಥವಾ 2 ತಿಂಗಳಿನ ಮಗುವಾಗಿದ್ದೇನೆಂದು ಬರೆಯುತ್ತಾರೆ. ಆದರೆ ನಿಮ್ಮ ಕರ್ಮೇಂದ್ರಿಯಗಳಂತೂ ದೊಡ್ಡದಾಗಿವೆ. ಆದ್ದರಿಂದ ತಂದೆಯು ತಿಳಿಸುತ್ತಾರೆ- ಮಕ್ಕಳೇ, ಇಲ್ಲಿ ತಂದೆ ಮತ್ತು ಆಸ್ತಿಯ ನೆನಪಿನಲ್ಲಿ ಕುಳಿತುಕೊಳ್ಳಬೇಕು. ನಿಮಗೆ ಗೊತ್ತಿದೆ. ನಾವು ನರನಿಂದ ನಾರಾಯಣರಾಗುವ ಪುರುಷಾರ್ಥದಲ್ಲಿ ತತ್ಪರರಾಗಿದ್ದೇವೆ ಅಥವಾ ಸ್ವರ್ಗದಲ್ಲಿ ಹೋಗುವುದಕ್ಕಾಗಿ ಪುರುಷಾರ್ಥ ಮಾಡುತ್ತಿದ್ದೇವೆ. ಅಂದಾಗ ನಾವು ಇಲ್ಲಿ ಉಳಿದಂತೆ ಎಷ್ಟು ಸಮಯ ನೆನಪು ಮಾಡಿದೆವು ಎಂಬುದನ್ನು ಮಕ್ಕಳು ಬರೆದುಕೊಳ್ಳಬೇಕು. ಬರೆಯುವುದರಿಂದ ಪ್ರತಿಯೊಬ್ಬರೂ ಎಷ್ಟು ಸಮಯ ನೆನಪಿನಲ್ಲಿರುತ್ತಾರೆಂದು ತಂದೆಗೆ ಗೊತ್ತಿರುತ್ತದೆ ಎಂದು ಸುಮ್ಮನಿರುವುದಿಲ್ಲ. ಪ್ರತಿಯೊಬ್ಬರೂ ತಮ್ಮ ಚಾರ್ಟ್ನಿಂದ ತಿಳಿಯಬಹುದಾಗಿದೆ. ಈಗ ತಂದೆಯು ಬರುತ್ತಾರೆ ಎಂಬುದು ಬುದ್ಧಿಯಲ್ಲಿದ್ದರೂ ಸಹ ಇದೂ ನೆನಪಾಯಿತಲ್ಲವೆ! ಎಷ್ಟು ಸಮಯ ನೆನಪು ಮಾಡಿದೆವೆಂಬುದನ್ನು ಸತ್ಯವಾಗಿ ಚಾರ್ಟ್ನಲ್ಲಿ ಬರೆಯಿರಿ. ಅಸತ್ಯವನ್ನು ಬರೆದರೆ ಇನ್ನೂ ಒಂದಕ್ಕೆ ನೂರರಷ್ಟು ಪಾಪವಾಗುತ್ತದೆ. ಇನ್ನೂ ನಷ್ಟವಾಗಿಬಿಡುತ್ತದೆ. ಆದ್ದರಿಂದ ಸತ್ಯವನ್ನು ಬರೆಯಬೇಕು. ಎಷ್ಟು ನೆನಪು ಮಾಡುತ್ತೀರೋ ಅಷ್ಟು ವಿಕರ್ಮಗಳು ವಿನಾಶವಾಗುತ್ತವೆ ಮತ್ತು ಇದನ್ನೂ ತಿಳಿದುಕೊಂಡಿದ್ದೀರಿ - ನಾವು ಸಮೀಪ ಬರುತ್ತಾ ಹೋಗುತ್ತೇವೆ. ಕೊನೆಗೆ ಯಾವಾಗ ನೆನಪು ಪೂರ್ಣವಾಗುವುದೋ ಆಗ ನಾವು ತಂದೆಯ ಬಳಿ ಹೊರಟುಹೋಗುತ್ತೇವೆ ಮತ್ತೆ ಕೆಲವರು ಅಲ್ಲಿಂದ ತಕ್ಷಣ ಹೊಸ ಪ್ರಪಂಚದಲ್ಲಿ ಬಂದು ಪಾತ್ರವನ್ನಭಿನಯಿಸುತ್ತಾರೆ. ಇನ್ನೂ ಕೆಲವರು ಅಲ್ಲಿಯೇ (ಪರಮಧಾಮ) ಕುಳಿತಿರುತ್ತಾರೆ. ಅಲ್ಲಿ ಯಾವುದೇ ಸಂಕಲ್ಪವಂತೂ ಬರುವುದಿಲ್ಲ. ಅದು ಮುಕ್ತಿಧಾಮ, ಸುಖ-ದುಃಖದಿಂದ ಭಿನ್ನವಾಗಿದೆ. ಸುಖಧಾಮದಲ್ಲಿ ಹೋಗುವುದಕ್ಕಾಗಿ ಈಗ ನೀವು ಪುರುಷಾರ್ಥ ಮಾಡುತ್ತೀರಿ. ನೀವು ಎಷ್ಟು ನೆನಪು ಮಾಡುವಿರೋ ಅಷ್ಟು ವಿಕರ್ಮಗಳು ವಿನಾಶವಾಗುತ್ತವೆ. ನೆನಪಿನ ಚಾರ್ಟ್ ಇಡುವುದರಿಂದಲೇ ಜ್ಞಾನದ ಧಾರಣೆಯೂ ಸಹ ಚೆನ್ನಾಗಿ ಆಗುತ್ತದೆ. ಚಾರ್ಟ್ ಇಡುವುದರಲ್ಲಿ ಲಾಭವೇ ಇದೆ. ತಂದೆಗೆ ಗೊತ್ತಿದೆ. ನೆನಪಿನಲ್ಲಿರದ ಕಾರಣ ಬರೆಯುವುದರಲ್ಲಿ ನಾಚಿಕೆಯಾಗುತ್ತದೆ. ತಂದೆಯು ಏನು ಹೇಳುವುದಿದೆ ಅದನ್ನು ಮುರುಳಿಯಲ್ಲಿ ತಿಳಿಸಿಬಿಡುತ್ತಾರೆ. ಇದಕ್ಕೆ ತಂದೆಯು ಹೇಳುತ್ತಾರೆ- ಇದರಲ್ಲಿ ನಾಚಿಕೆಯ ಮಾತೇನಿದೆ? ನಾನು ನೆನಪು ಮಾಡುತ್ತೇನೆಯೇ ಅಥವಾ ಇಲ್ಲವೆ ಎಂದು ಪ್ರತಿಯೊಬ್ಬರೂ ಆಂತರಿಕವಾಗಿ ತಿಳಿದುಕೊಳ್ಳಬಹುದು. ಕಲ್ಯಾಣಕಾರಿ ತಂದೆಯಂತೂ ತಿಳಿಸುತ್ತಾರೆ. ಬರೆದರೆ ನಿಮ್ಮದೇ ಕಲ್ಯಾಣವಾಗುವುದು. ತಂದೆಯು ಬರುವವರೆಗೆ ಅಷ್ಟೂ ಸಮಯ ನೆನಪಿನಲ್ಲಿ ಕುಳಿತಿದ್ದೇನೆ. ಆ ನೆನಪಿನ ಚಾರ್ಟ್ ಎಷ್ಟಿತ್ತು? ಹೀಗೆ ಅಂತರವನ್ನು ನೋಡಿಕೊಳ್ಳಬೇಕು. ಪ್ರಿಯವಾದ ವಸ್ತು ವನ್ನಂತೂ ಬಹಳ ನೆನಪು ಮಾಡಲಾಗುತ್ತದೆ. ಹೇಗೆ ಕುಮಾರ-ಕುಮಾರಿಯ ನಿಶ್ಚಿತಾರ್ಥವಾಗುತ್ತದೆಯೆಂದರೆ ಮನಸ್ಸಿನಲ್ಲಿ ಪರಸ್ಪರ ಒಬ್ಬರಿಗೆ ಇನ್ನೊಬ್ಬರ ನೆನಪು ನಿಂತುಬಿಡುತ್ತದೆ. ನಂತರ ವಿವಾಹವಾದಾಗ ಇನ್ನೂ ಪಕ್ಕಾ ಆಗಿಬಿಡುತ್ತದೆ. ನೋಡದಿದ್ದರೂ ಸಹ ನಮ್ಮ ನಿಶ್ಚಿತಾರ್ಥವಾಗಿದೆ ಎಂದು ತಿಳಿದುಕೊಳ್ಳುತ್ತಾರೆ. ಈಗ ನೀವು ಮಕ್ಕಳಿಗೆ ಗೊತ್ತಿದೆ. ಶಿವತಂದೆಯು ನಮ್ಮ ಬೇಹದ್ದಿನ ತಂದೆಯಾಗಿದ್ದಾರೆ. ಭಲೆ ನೋಡಿಲ್ಲ ಆದರೆ ಬುದ್ಧಿಯಿಂದಂತೂ ಅರಿತುಕೊಳ್ಳಬಹುದು. ಅವರು ನಾಮ-ರೂಪದಿಂದ ಭಿನ್ನವಾಗಿದ್ದಾರೆ ಎಂದು ತಿಳಿಯುತ್ತಾರೆ. ಹಾಗಿದ್ದರೆ ಅವರ ಪೂಜೆಯನ್ನೇಕೆ ಮಾಡುತ್ತೀರಿ? ನೆನಪೇಕೆ ಮಾಡುತ್ತೀರಿ? ನಾಮರೂಪದಿಂದ ಭಿನ್ನವಾದ ಯಾವುದೇ ವಸ್ತುವಿರುವುದಿಲ್ಲ. ಅವಶ್ಯವಾಗಿ ವಸ್ತುವನ್ನು ನೋಡಿದಾಗಲೇ ಅದರ ವರ್ಣನೆ ಮಾಡಲಾಗುತ್ತದೆ. ಆಕಾಶವನ್ನು ನೋಡುತ್ತಾರಲ್ಲವೆ. ಬೇಅಂತ್ ಎಂದು ಹೇಳಲು ಸಾಧ್ಯವಿಲ್ಲ. ಭಕ್ತಿಮಾರ್ಗದಲ್ಲಿ ಭಗವಂತನನ್ನು ಹೇ ಭಗವಂತ ಎಂದು ನೆನಪು ಮಾಡುತ್ತಾರೆ. ಅಂದಾಗ ಬೇಅಂತ್ ಎಂದು ಹೇಳುವುದಿಲ್ಲ. ಹೇ ಭಗವಂತ ಎಂದು ಹೇಳಿದಾಗ ತಕ್ಷಣ ಅವರ ನೆನಪು ಬರುತ್ತದೆ. ಅಂದಮೇಲೆ ಅವಶ್ಯವಾಗಿ ಯಾವುದೋ ರೂಪವಿದೆ. ಆತ್ಮವನ್ನು

ಅರಿತುಕೊಳ್ಳಲಾಗುತ್ತದೆಯೇ ಹೊರತು ಸ್ಥೂಲಕಣ್ಣುಗಳಿಂದ ನೋಡಲು ಸಾಧ್ಯವಿಲ್ಲ.

ಎಲ್ಲಾ ಆತ್ಮಗಳಿಗೆ ಒಬ್ಬರೇ ತಂದೆಯಾಗಿದ್ದಾರೆ. ಅವರನ್ನು ಬುದ್ಧಿಯಿಂದ ಅರಿತುಕೊಳ್ಳಬೇಕಾಗುತ್ತದೆ. ನೀವು ಮಕ್ಕಳಿಗೆ ಗೊತ್ತಿದೆ. ತಂದೆಯು ಓದಿಸುತ್ತಾರೆ. ಅವರು ಬಂದು ಓದಿಸುತ್ತಾರೆಂದು ಮೊದಲಿಗೆ ಗೊತ್ತಿರಲಿಲ್ಲ. ಕೃಷ್ಣನ ಹೆಸರನ್ನು ಹಾಕಿಬಿಟ್ಟಿದ್ದಾರೆ. ಕೃಷ್ಣನನ್ನಂತೂ ಈ ಕಣ್ಣುಗಳಿಂದ ನೋಡಬಹುದು. ಆದ್ದರಿಂದ ಕೃಷ್ಣನಿಗೆ ಬೇಹಂತ್, ನಾಮರೂಪದಿಂದ ಭಿನ್ನವೆಂದು ಹೇಳಲು ಸಾಧ್ಯವಿಲ್ಲ. ನನ್ನೊಬ್ಬನನ್ನೇ ನೆನಪು ಮಾಡಿ ಎಂದು ಕೃಷ್ಣನು ಎಂದೂ ಹೇಳುವುದಿಲ್ಲ. ಕೃಷ್ಣನಂತೂ ಸಮ್ಮುಖದಲ್ಲಿದ್ದಾರೆ. ಕೃಷ್ಣನಿಗೆ ತಂದೆಯೆಂತಲೂ ಹೇಳುವುದಿಲ್ಲ. ಮಾತೆಯರು ಕೃಷ್ಣನನ್ನು ಮಗುವೆಂದು ತಿಳಿದು ಮಡಿಲಿನಲ್ಲಿ ಕುಳ್ಳರಿಸಿಕೊಳ್ಳುತ್ತಾರೆ. ಜನ್ಮಾಷ್ಟಮಿಯಲ್ಲಂತೂ ಪುಟ್ಟ ಕೃಷ್ಣನನ್ನು ತೊಟ್ಟಿಲಲ್ಲಿ ತೂಗುತ್ತಾರೆ. ಅಂದಾಗ ಕೃಷ್ಣನು ಸದಾ ಚಿಕ್ಕವನಾಗಿಯೇ ಇರುತ್ತಾನೆಯೇ? ಮತ್ತೆ ರಾಸಲೀಲೆಯನ್ನು ತೋರಿಸುತ್ತಾರೆ. ಅಂದಾಗ ಅವಶ್ಯವಾಗಿ ಸ್ವಲ್ಪ ದೊಡ್ಡವನಾದನು ನಂತರದ ಅದಕ್ಕಿಂತಲೂ ದೊಡ್ಡವನಾದನೆ ಅಥವಾ ಏನಾದನು, ಎಲ್ಲಿ ಹೋದನು ಎಂಬುದು ಯಾರಿಗೂ ಗೊತ್ತಿಲ್ಲ. ಸದಾ ಚಿಕ್ಕಶರೀರವು ಹಾಗೆಯೇ ಇರುವುದಿಲ್ಲ ಅಲ್ಲವೆ. ಇದನ್ನು ವಿಚಾರವೇ ಮಾಡುವುದಿಲ್ಲ. ಈ ಪೂಜೆ ಇತ್ಯಾದಿಗಳನ್ನು ಮಾಡುವ ಪದ್ಧತಿಯೇ ನಡೆದುಬರುತ್ತದೆ. ಜ್ಞಾನವು ಯಾರಲ್ಲಿಯೂ ಇಲ್ಲ. ಕೃಷ್ಣನು ಕಂಸಪುರಿಯಲ್ಲಿ ಜನ್ಮ ತೆಗೆದುಕೊಂಡರೆಂದು ತೋರಿಸುತ್ತಾರೆ. ಈಗ ಕಂಸಪುರಿಯ ಮಾತೇ ಇಲ್ಲ. ಯಾರಿಗೂ ವಿಚಾರವೇ ನಡೆಯುವುದಿಲ್ಲ. ಎಲ್ಲಿ ನೋಡಿದರಲ್ಲಿ ಕೃಷ್ಣನೇ ಕೃಷ್ಣನಿದ್ದಾನೆಂದು ಭಕ್ತರು ಹೇಳುತ್ತಾರೆ. ನಂತರ ಕೃಷ್ಣನಿಗೆ ಸ್ನಾನವನ್ನೂ ಮಾಡಿಸುತ್ತಾರೆ, ತಿನ್ನಿಸುತ್ತಾರೆ. ಕೃಷ್ಣನಂತೂ ತಿನ್ನುವುದಿಲ್ಲ. ಕೃಷ್ಣನ ಮೂರ್ತಿಯ ಮುಂದೆ ಇಡುತ್ತಾರೆ. ಮತ್ತೆ ತಾವೇ ತಿನ್ನುತ್ತಾರೆ. ಇದು ಭಕ್ತಿಮಾರ್ಗವಾಯಿತಲ್ಲವೆ. ಶ್ರೀನಾಥದ್ವಾರದಲ್ಲಿ ಅಷ್ಟೊಂದು ಭೋಗವನ್ನಿಡುತ್ತಾರೆ. ಶ್ರೀನಾಥನಂತೂ ತಿನ್ನುವುದಿಲ್ಲ. ಮತ್ತೆ ಅದನ್ನು ತಾವೇ ತಿನ್ನುತ್ತಾರೆ. ದೇವಿಯರ ಪೂಜೆಯಲ್ಲಿಯೂ ಇದೇ ರೀತಿ ಮಾಡುತ್ತಾರೆ. ಮತ್ತೆ ತಾವೇ ದೇವಿಯರ ಮೂರ್ತಿಯನ್ನು ಮಾಡುತ್ತಾರೆ. ನಂತರ ಪೂಜೆ ಮಾಡಿ ನೀರಿನಲ್ಲಿ ಮುಳುಗಿಸಿಬಿಡುತ್ತಾರೆ. ಆಭರಣಗಳನ್ನು ಬಿಚ್ಚಿ ನೀರಿನಲ್ಲಿ ಮುಳುಗಿಸುತ್ತಾರೆ. ಮತ್ತೆ ಅಲ್ಲಿ ಅನೇಕರಿರುತ್ತಾರೆ. ಯಾರಿಗೇನು ಕೈಗೆ ಸಿಗುತ್ತದೆಯೋ ಅದನ್ನು ತೆಗೆದುಕೊಳ್ಳುತ್ತಾರೆ. ಹೆಚ್ಚಿನದಾಗಿ ದೇವಿಯರ ಪೂಜೆ ಮಾಡುತ್ತಾರೆ. ಲಕ್ಷ್ಮೀ ಮತ್ತು ದುರ್ಗಾ ಇಬ್ಬರ ಮೂರ್ತಿಗಳನ್ನು ಮಾಡುತ್ತಾರೆ. ದೊಡ್ಡ ತಾಯಿ (ಬ್ರಹ್ಮ)ಯು ಇಲ್ಲಿ ಕುಳಿತಿದ್ದಾರಲ್ಲವೆ. ಇವರಿಗೆ ಬ್ರಹ್ಮಪುತ್ರನೆಂದು ಹೇಳುತ್ತಾರೆ. ತಿಳಿಯುತ್ತಾರಲ್ಲವೆ - ಈ ಜನ್ಮ ಮತ್ತು ಭವಿಷ್ಯದ ರೂಪದ ಪೂಜೆ ಮಾಡುತ್ತಿದ್ದಾರೆ. ಎಷ್ಟು ವಿಚಿತ್ರವಾದ ನಾಟಕವಾಗಿದೆ. ಇಂತಿಂತಹ ಮಾತುಗಳು ಶಾಸ್ತ್ರಗಳಲ್ಲಿ ಬರುವುದಿಲ್ಲ. ಇದು ಪ್ರತ್ಯಕ್ಷ ಚಟುವಟಿಕೆಯಾಗಿದೆ. ನೀವು ಮಕ್ಕಳಿಗೆ ಈಗ ಜ್ಞಾನವಿದೆ. ಎಲ್ಲದಕ್ಕಿಂತ ಹೆಚ್ಚಿನದಾಗಿ ಆತ್ಮಗಳ ಚಿತ್ರಗಳನ್ನು ಮಾಡಿದ್ದಾರೆ. ರುದ್ರಯಜ್ಞವನ್ನು ರಚಿಸಿದಾಗ ಲಕ್ಷಾಂತರ ಸಾಲಿಗ್ರಾಮಗಳನ್ನು ಮಾಡುತ್ತಾರೆ. ಎಂದೂ ಲಕ್ಷಾಂತರ ದೇವಿಯರ ಚಿತ್ರವನ್ನು ಮಾಡುವುದಿಲ್ಲ. ದೇವಿಯರನ್ನಂತೂ ಎಷ್ಟು ಮಂದಿ ಪೂಜಾರಿಗಳಿರುತ್ತಾರೆಯೋ ಅಷ್ಟು ಮಂದಿ ದೇವಿಯರನ್ನು ಮಾಡುತ್ತಾರೆ. ಆದರೆ ಸಾಲಿಗ್ರಾಮಗಳನ್ನಂತೂ ಒಂದೇ ಸಮಯದಲ್ಲಿ ಲಕ್ಷಾಂತರ ಸಾಲಿಗ್ರಾಮಗಳನ್ನು ಮಾಡುತ್ತಾರೆ. ಹೇಗೆ ದೇವಿಯರ ಪೂಜೆಯು ನಿಗಧಿತ ಸಮಯದಲ್ಲಿ ಆಗುತ್ತದೆ. ಆದರೆ ಸಾಲಿಗ್ರಾಮಗಳಿಗೆ ಯಾವುದೇ ನಿಗಧಿಯಾದ ದಿನವಿರುವುದಿಲ್ಲ. ಯಾವುದೇ ಮುಹೂರ್ತ ಇರುವುದಿಲ್ಲ. ವ್ಯಾಪಾರಿಗಳಿಗೆ ರುದ್ರ ಅಥವಾ ಸಾಲಿಗ್ರಾಮಗಳನ್ನು ರಚಿಸಬೇಕೆಂದು ವಿಚಾರ ಬಂದಾಗ ಬ್ರಾಹ್ಮಣರನ್ನು ಕರೆಸುತ್ತಾರೆ. ಒಬ್ಬ ತಂದೆಗೆ ರುದ್ರನೆಂದು ಹೇಳಲಾಗುತ್ತದೆ. ಮತ್ತೆ ಅವರ ಜೊತೆ ಅನೇಕ ಸಾಲಿಗ್ರಾಮಗಳನ್ನು ಮಾಡುತ್ತಾರೆ. ಇಷ್ಟು ಸಾಲಿಗ್ರಾಮಗಳನ್ನು ಮಾಡಿ ಎಂದು ವ್ಯಾಪಾರಿಗಳು ಹೇಳುತ್ತಾರೆ. ಅದಕ್ಕೆ ಯಾವುದೇ ತಿಥಿ-ತಾರೀಖು ನಿಗಧಿಯಿರುವುದಿಲ್ಲ. ಶಿವಜಯಂತಿಯಂದೇ ರುದ್ರಪೂಜೆ ಮಾಡುತ್ತಾರೆಂದೂ ಅಲ್ಲ. ಬಹಳಮಟ್ಟಿಗೆ ಶುಭದಿನದಂದು ಬೃಹಸ್ಪತಿಯನ್ನೂ ಇಡುತ್ತಾರೆ. ದೀಪಾವಳಿಯಂದು ಲಕ್ಷ್ಮೀಯ ಚಿತ್ರವನ್ನು ತಟ್ಟೆಯಲ್ಲಿಟ್ಟು ಅವರ ಪೂಜೆ ಮಾಡುತ್ತಾರೆ. ನಂತರ ಪ್ರತಿಷ್ಠಾಪಿಸುತ್ತಾರೆ. ಅವರು ಮಹಾಲಕ್ಷ್ಮಿಯಾಗಿದ್ದಾರೆ. ಇಬ್ಬರಿದ್ದಾರಲ್ಲವೆ! ಮನುಷ್ಯರು ಈ ಮಾತುಗಳನ್ನು ಅರಿತುಕೊಂಡಿಲ್ಲ. ಲಕ್ಷ್ಮೀಗೆ ಹಣವೆಲ್ಲಿಂದ ಸಿಗುತ್ತದೆ? ದಂಪತಿಗಳೂ ಬೇಕಲ್ಲವೆ. ಅಂದಾಗ ಈ ಲಕ್ಷ್ಮೀ-ನಾರಾಯಣರು ದಂಪತಿಯಾಗಿದ್ದಾರೆ. ಆದ್ದರಿಂದ ಇದಕ್ಕೆ ಮಹಾಲಕ್ಷ್ಮಿಯೆಂದು ಹೆಸರಿಟ್ಟುಬಿಡುತ್ತಾರೆ. ಯಾವಾಗ ದೇವಿಯಾದರು, ಮಹಾಲಕ್ಷ್ಮಿಯು ಯಾವಾಗ ಇದ್ದು ಹೋದರು? ಇವೆಲ್ಲಾ ಮಾತುಗಳನ್ನು ಮನುಷ್ಯರು ಅರಿತುಕೊಂಡಿಲ್ಲ. ಈಗ ನಿಮಗೆ ತಂದೆಯು ಕುಳಿತು ತಿಳಿಸುತ್ತಾರೆ. ನಿಮ್ಮಲ್ಲಿಯೂ ಎಲ್ಲರಿಗೆ ಏಕರಸವಾಗಿ ಧಾರಣೆಯಾಗುವುದಿಲ್ಲ. ತಂದೆಯು ಇಷ್ಟೆಲ್ಲವನ್ನೂ ತಿಳಿಸಿದ ನಂತರವೂ ಹೇಳುತ್ತಾರೆ - ಶಿವತಂದೆಯ ನೆನಪಿದೆಯೇ? ಆಸ್ತಿಯ ನೆನಪಿದೆಯೇ? ಮೂಲಮಾತೇ ಇದಾಗಿದೆ. ಭಕ್ತಿಮಾರ್ಗದಲ್ಲಿ ಎಷ್ಟೊಂದು ಹಣವನ್ನು ವ್ಯರ್ಥ ಮಾಡುತ್ತಾರೆ. ಇಲ್ಲಿ ನಿಮ್ಮದು ಒಂದು ಪೈಸೆಯೂ ವ್ಯರ್ಥವಾಗುವುದಿಲ್ಲ. ನೀವು ಧನವಂತರಾಗುವುದಕ್ಕಾಗಿಯೇ ಸರ್ವೀಸ್ ಮಾಡುತ್ತೀರಿ. ಭಕ್ತಿಮಾರ್ಗದಲ್ಲಂತೂ ಬಹಳಷ್ಟು ಹಣವನ್ನು ಖರ್ಚು ಮಾಡುತ್ತಾರೆ. ಬಡವರಾಗಿಬಿಡುತ್ತಾರೆ. ಎಲ್ಲವೂ ಮಣ್ಣುಪಾಲಾಗಿ ಬಿಡುತ್ತದೆ. ಎಷ್ಟೊಂದು ಅಂತರವಿದೆ! ಈ ಸಮಯದಲ್ಲಿ ಏನೆಲ್ಲವನ್ನೂ ಮಾಡುತ್ತಾರೆಯೋ ಅದನ್ನು ಈಶ್ವರೀಯ ಸೇವೆಯಲ್ಲಿ ಶಿವತಂದೆಗೆ ಕೊಡುತ್ತೀರಿ. ಶಿವತಂದೆಯಂತೂ ತಿನ್ನುವುದಿಲ್ಲ. ನೀವೇ ತಿನ್ನುತ್ತೀರಿ. ನೀವು ಬ್ರಾಹ್ಮಣರು ಮಧ್ಯದಲ್ಲಿ ನಿಮಿತ್ತರಾಗಿದ್ದೀರಿ. ನೀವು ಬ್ರಹ್ಮನಿಗೆ ಕೊಡುವುದಿಲ್ಲ. ಶಿವತಂದೆಗೆ ಕೊಡುತ್ತೀರಿ. ಬಾಬಾ, ತಮಗಾಗಿ ವಸ್ತ್ರಗಳನ್ನು ತಂದಿದ್ದೇವೆ ಎಂದು ಹೇಳುತ್ತಾರೆ. ಅದಕ್ಕೇ ತಂದೆಯು ತಿಳಿಸುತ್ತಾರೆ- ಈ ಬ್ರಹ್ಮಾರವರಿಗೆ ಕೊಡುವುದರಿಂದ ನಿಮ್ಮದೇನೂ ಜಮಾ ಆಗುವುದಿಲ್ಲ. ಬ್ರಹ್ಮಾತಂದೆ ಹೇಳುತ್ತಾರೆ- ನೀವು ನನ್ನನ್ನು ನೆನಪು ಮಾಡಬೇಡಿ. ಶಿವತಂದೆಗೆ ಕೊಡುತ್ತೀರೆಂದರೆ ಆಗ ಅದು ಜಮಾ ಆಗುತ್ತದೆ. ಮತ್ತೆ ಇದಂತೂ ನಿಮಗೆ ಗೊತ್ತಿದೆ. ಬ್ರಾಹ್ಮಣರು

ಶಿವತಂದೆಯ ಖಜಾನೆಯಿಂದಲೇ ಪಾಲನೆ ಪಡೆಯುತ್ತಾರೆ. ಏನನ್ನು ಕಳುಹಿಸಲಿ ಎಂದು ಈ ಬ್ರಹ್ಮಾರವರನ್ನು ಕೇಳುವ ಅವಶ್ಯಕತೆಯಿಲ್ಲ. ಇವರಂತೂ ತೆಗೆದುಕೊಳ್ಳುವುದಿಲ್ಲ. ಒಂದುವೇಳೆ ಕೊಡುವಾಗ ಬ್ರಹ್ಮಾಬಾಬಾನನ್ನು ನೆನಪು ಮಾಡಿದರೆ ನಿಮ್ಮದಂತೂ ಜಮಾ ಆಗುವುದಿಲ್ಲ. ಈ ಬಹ್ಮಾಬಾಬಾರವರು ಸದಾ ಶಿವತಂದೆಯ ಖಜಾನೆಯಿಂದಲೇ ತೆಗೆದುಕೊಳ್ಳಬೇಕಾಗಿದೆ. ಅಂದಮೇಲೆ ಶಿವತಂದೆಯ ನೆನಪೇ ಬರುತ್ತದೆ. ನಿಮ್ಮ ವಸ್ತುಗಳನ್ನು ಏಕೆ ತೆಗೆದುಕೊಳ್ಳುತ್ತಾರೆ? ಬಿ.ಕೆ.ಗಳಿಗೆ ಕೊಡುವುದೂ ತಪ್ಪಾಗಿದೆ. ತಂದೆಯೂ ತಿಳಿಸಿದ್ದಾರೆ - ನೀವು ಯಾರಿಂದಲಾದರೂ ವಸ್ತುವನ್ನು ತೆಗೆದುಕೊಂಡು ಉಪಯೋಗಿಸುತ್ತೀರೆಂದರೆ ಅವರ ನೆನಪೇ ಬರುತ್ತಿರುತ್ತದೆ. ಚಿಕ್ಕಪುಟ್ಟ ವಸ್ತುವಿಗೆ ಇದು ಅನ್ವಯಿಸುವುದಿಲ್ಲ. ಒಳ್ಳೆಯ ವಸ್ತುವಾಗಿದ್ದರೆ ಇಂತಹವರು ಇದನ್ನು ಕೊಟ್ಟರೆಂದು ಹೆಚ್ಚಿನದಾಗಿ ನೆನಪೇ ತರಿಸುತ್ತದೆ. ಅವರದೇನೂ ಜಮಾ ಆಗುವುದಿಲ್ಲ. ಅಂದಾಗ ನಷ್ಟವಾಯಿತಲ್ಲವೆ. ಶಿವತಂದೆಯು ತಿಳಿಸುತ್ತಾರೆ- ನನ್ನೊಬ್ಬನನ್ನು ನೆನಪು ಮಾಡಿ, ನನಗೆ ವಸ್ತ್ರ ಇತ್ಯಾದಿಗಳ ಅವಶ್ಯಕತೆಯಿಲ್ಲ. ವಸ್ತ್ರ ಇತ್ಯಾದಿ ಮಕ್ಕಳಿಗೆ ಬೇಕು. ಅದನ್ನು ಶಿವತಂದೆಯ ಖಜಾನೆಯಿಂದ ಉಪಯೋಗಿಸುತ್ತಾರೆ. ನನಗಂತೂ ನನ್ನದೇ ಆದ ಶರೀರವಿಲ್ಲ. ಇವರಂತೂ (ಬ್ರಹ್ಮ) ಶಿವತಂದೆಯ ಖಜಾನೆಯಿಂದ ತೆಗೆದುಕೊಳ್ಳಲು ಹಕ್ಕುದಾರರಾಗಿದ್ದಾರೆ. ರಾಜ್ಯಭಾಗ್ಯಕ್ಕೂ ಹಕ್ಕುದಾರರಾಗಿದ್ದಾರೆ. ಎಷ್ಟು ಹೆಚ್ಚು ಸೇವೆ ಅಷ್ಟು ಹೆಚ್ಚಿನ ಸಂಪಾದನೆಯಾಗುವುದು. ಶಿವತಂದೆಯ ಭಂಡಾರದಿಂದಲೇ ತಿನ್ನುತ್ತೀರಿ, ಕುಡಿಯುತ್ತೀರಿ ಅವರಿಗೆ ಕೊಡುವುದಿಲ್ಲವೆಂದರೆ ನಿಮಗೆ ಜಮಾ ಆಗುವುದಿಲ್ಲ. ಶಿವತಂದೆಗೆ ಕೊಡಲಾಗುತ್ತದೆ. ಬಾಬಾ, ತಮ್ಮಿಂದ ಭವಿಷ್ಯದ 21 ಜನ್ಮಗಳಿಗಾಗಿ ಪದಮಾಪದಮಪತಿ ಆಗುತ್ತೇವೆ. ಹಣವಂತೂ ಸಮಾಪ್ತಿಯಾಗುತ್ತದೆ. ಆದ್ದರಿಂದ ಸಮರ್ಥರಿಗೆ ನಾವು ಕೊಡುತ್ತೇವೆ. ತಂದೆಯು ಸಮರ್ಥರಾಗಿದ್ದಾರಲ್ಲವೆ. ಅವರು 21 ಜನ್ಮಗಳಿಗೆ ಕೊಡುತ್ತಾರೆ. ಪರೋಕ್ಷವಾಗಿಯೂ ಈಶ್ವರಾರ್ಥವಾಗಿ ಕೊಡುತ್ತಾರಲ್ಲವೆ. ಪರೋಕ್ಷವಾಗಿ ಇಷ್ಟು ಸಮರ್ಥತೆಯಿಲ್ಲ. ಈಗಂತೂ ಬಹಳ ಸಮರ್ಥವಾಗಿದ್ದಾರೆ. ಏಕೆಂದರೆ ಸಮ್ಮುಖದಲ್ಲಿದ್ದಾರೆ. ಈ ಸಮಯಕ್ಕಾಗಿ ಅವರು ವಿಶ್ವದ ಸರ್ವಶಕ್ತಿವಂತನಾಗಿದ್ದಾರೆ.

ಈಶ್ವರಾರ್ಥವಾಗಿ ಏನಾದರೂ ದಾನ-ಪುಣ್ಯ ಮಾಡುತ್ತಾರೆಂದರೆ ಅಲ್ಪಕಾಲಕ್ಕಾಗಿ ಸಿಕ್ಕಿಬಿಡುತ್ತದೆ. ಇಲ್ಲಂತೂ ತಂದೆಯು ನಿಮಗೆ ತಿಳಿಸುತ್ತಾರೆ- ನಾನು ಸಮ್ಮುಖದಲ್ಲಿದ್ದೇನೆ. ನಾನೇ ಕೊಡುವವನಾಗಿದ್ದೇನೆ. ಈ ಬ್ರಹ್ಮರವರೂ ಸಹ ಶಿವತಂದೆಗೆ ಎಲ್ಲವನ್ನೂ ಕೊಟ್ಟು, ಇಡೀ ವಿಶ್ವದ ರಾಜ್ಯಭಾಗ್ಯವನ್ನು ತೆಗೆದುಕೊಂಡವರಲ್ಲವೆ. ಇದೂ ಸಹ ನಿಮಗೆ ಗೊತ್ತಿದೆ. ಈ ವ್ಯಕ್ತವೇ ಅವ್ಯಕ್ತರೂಪದಲ್ಲಿ ಸಾಕ್ಷಾತ್ಕಾರವಾಗುತ್ತದೆ. ಇವರಲ್ಲಿ ಶಿವತಂದೆಯು ಬಂದು ಮಕ್ಕಳೊಂದಿಗೆ ಮಾತನಾಡುತ್ತಾರೆ. ನಾವು ಮನುಷ್ಯರಿಂದ ತೆಗೆದುಕೊಳ್ಳುತ್ತೇವೆಂದು ಎಂದಿಗೂ ವಿಚಾರದಲ್ಲಿಯೂ ಬರಬಾರದು. ತಿಳಿಸಿ, ಶಿವತಂದೆಯ ಭಂಡಾರಕ್ಕೆ ಕಳುಹಿಸಿಕೊಡಿ, ಈ ಬ್ರಹ್ಮಾರವರ ನೆನಪಿನಲ್ಲಿ ಕೊಡುವುದರಿಂದ ಏನೂ ಸಿಗುವುದಿಲ್ಲ. ಇನ್ನೂ ನಷ್ಟವಾಗುತ್ತದೆ. ಬಡವರಿರುತ್ತಾರೆ, 3-4 ರೂಪಾಯಿಗಳ ಯಾವುದೇ ವಸ್ತುವನ್ನು ನಿಮಗೆ ಕೊಡುತ್ತಾರೆ. ಇದನ್ನು ಶಿವತಂದೆಯ ಭಂಡಾರದಲ್ಲಿ ಹಾಕುವುದರಿಂದ ಅದು ಪದಮದಷ್ಟಾಗಿಬಿಡುತ್ತದೆ. ಅಂದಮೇಲೆ ತಮಗೇಕೆ ನಷ್ಟ ಮಾಡಿಕೊಳ್ಳಬೇಕು. ಬಹಳಮಟ್ಟಿಗೆ ದೇವಿಯರದೇ ಪೂಜೆಯಾಗುತ್ತದೆ. ಏಕೆಂದರೆ ನೀವು ದೇವಿಯರೇ ಜ್ಞಾನವನ್ನು ಕೊಡಲು ನಿಮಿತ್ತರಾಗುತ್ತೀರಿ. ಭಲೆ ಗೋಪರು ತಿಳಿಸುತ್ತಾರೆ. ಆದರೆ ಬಹಳ ಮಟ್ಟಿಗೆ ಮಾತೇಯರೇ ಬ್ರಾಹ್ಮಿಣಿಯರಾಗಿ ಮಾರ್ಗವನ್ನು ತಿಳಿಸುತ್ತಾರೆ. ಆದ್ದರಿಂದ ಹೆಚ್ಚಿನದಾಗಿ ದೇವಿಯರ ಹೆಸರಿದೆ. ದೇವಿಯರಿಗೆ ಬಹಳಷ್ಟು ಪೂಜೆಯಾಗುತ್ತದೆ. ಇದನ್ನೂ ಸಹ ನೀವು ಮಕ್ಕಳು ತಿಳಿದುಕೊಂಡಿದ್ದೀರಿ – ಅರ್ಧ ಕಲ್ಪ ನಾವು ಪೂಜ್ಯರಾಗಿದ್ದೇವು. ಮೊದಲು ಪೂರ್ಣ ಪೂಜ್ಯರಾಗಿದ್ದೇವು. ನಂತರ ಅರ್ಧಪೂಜ್ಯರು ಏಕೆಂದರೆ ಎರಡು ಕಲೆಗಳು ಕಡಿಮೆಯಾಗಿಬಿಡುತ್ತವೆ. ತ್ರೇತಾಯುಗದಲ್ಲಿ ರಾಮರಾಜ್ಯವೆಂದು ಹೇಳುತ್ತಾರೆ. ಮನುಷ್ಯರು ಲಕ್ಷಾಂತರ ವರ್ಷಗಳೆಂದು ಹೇಳುತ್ತಾರೆ. ಇದರಿಂದ ಲೆಕ್ಕವೇ ಸಿಗದಂತಾಗಿ ಬಿಡುತ್ತದೆ. ಭಕ್ತಿಮಾರ್ಗದವರ ಬುದ್ಧಿಗೂ ಮತ್ತು ನಿಮ್ಮ ಬುದ್ಧಿಗೂ ಹಗಲು-ರಾತ್ರಿಯ ಅಂತರವಿದೆ. ನೀವು ಈಶ್ವರೀಯ ಬುದ್ಧಿಯವರಾಗಿದ್ದೀರಿ, ಅವರು ರಾವಣನ ಬುದ್ಧಿಯವರಾಗಿದ್ದಾರೆ. ನಿಮ್ಮ ಬುದ್ಧಿಯಲ್ಲಿದೆ - ಈ ಇಡೀ ಚಕ್ರವೇ 5000 ವರ್ಷಗಳದ್ದಾಗಿದೆ. ಅದು ಸುತ್ತುತ್ತಾ ಇರುತ್ತದೆ. ಯಾರು ರಾತ್ರಿಯಲ್ಲಿರುವರೋ (ಅಜ್ಞಾನ) ಅವರು ಲಕ್ಷಾಂತರ ವರ್ಷಗಳೆಂದು ಹೇಳುತ್ತಾರೆ. ಯಾರು ದಿನದಲ್ಲಿದ್ದಾರೆಯೋ ಅವರು 5000 ವರ್ಷಗಳೆಂದು ಹೇಳುತ್ತಾರೆ. ಅರ್ಧಕಲ್ಪ ಭಕ್ತಿಮಾರ್ಗದಲ್ಲಿ ನೀವು ಅಸತ್ಯ ಮಾತುಗಳನ್ನು ಕೇಳಿದ್ದೀರಿ. ಸತ್ಯಯುಗದಲ್ಲಿ ಇಂತಹ ಮಾತುಗಳಿರುವುದೇ ಇಲ್ಲ. ಅಲ್ಲಂತೂ ಆಸ್ತಿಯು ಸಿಗುತ್ತದೆ. ಈಗ ನಿಮಗೆ ನೇರವಾದ ಮತವು ಸಿಗುತ್ತದೆ. ಶ್ರೀಮದ್ಭಗವದ್ಗೀತೆ ಆಗಿದೆಯಲ್ಲವೆ! ಮತ್ಯಾವುದೇ ಶಾಸ್ತ್ರದಲ್ಲಿ ಶ್ರೀಮತ್ ಎನ್ನುವ ಹೆಸರಿಲ್ಲ. ಪ್ರತಿ 5000 ವರ್ಷಗಳ ನಂತರ ಈ ಪುರುಷೋತ್ತಮ ಸಂಗಮಯುಗ, ಗೀತಾಯುಗ ಬರುತ್ತದೆ. ಲಕ್ಷಾಂತರ ವರ್ಷಗಳ ಮಾತಾಗಿರಲು ಸಾಧ್ಯವಿಲ್ಲ. ಯಾರೇ ಬರಲಿ ಅವರನ್ನು ಸಂಗಮಯುಗದ ಚಿತ್ರದ ಬಳಿ ಕರೆದುಕೊಂಡು ಹೋಗಿ ಬೇಹದ್ದಿನ ತಂದೆಯು ರಚಿಯಿತ ಅರ್ಥಾತ್ ತನ್ನ ಮತ್ತು ರಚನೆಯ ಪೂರ್ಣಪರಿಚಯವನ್ನು ಕೊಟ್ಟಿದ್ದಾರೆ. ಆದರೂ ಮತ್ತೆ ತಿಳಿಸುತ್ತಾರೆ - ಒಳ್ಳೆಯದು, ತಂದೆಯನ್ನು ನೆನಪು ಮಾಡಿ. ಮತ್ತೇನಾದರೂ ಧಾರಣೆ ಮಾಡಲಾಗದಿದ್ದರೂ ಸಹ ತಮ್ಮನ್ನು ಆತ್ಮನೆಂದು ತಿಳಿದು ತಂದೆಯನ್ನು ನೆನಪು ಮಾಡಿ, ಪವಿತ್ರರಂತೂ ಆಗಲೇಬೇಕಾಗಿದೆ. ತಂದೆಯಿಂದ ಆಸ್ತಿಯನ್ನು ತೆಗೆದುಕೊಳ್ಳುತ್ತೀರಿ ಅಂದಮೇಲೆ ದೈವೀಗುಣಗಳನ್ನೂ ಧಾರಣೆ ಮಾಡಬೇಕಾಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳ ಪ್ರತಿ ಮಾತಾಪಿತ ಬಾಪ್ದಾದಾರವರ ನೆನಪು-ಪ್ರೀತಿ ಹಾಗೂ

ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. 21 ಜನ್ಮಗಳಿಗಾಗಿ ಪದುಮಗಳ ಸಂಪಾದನೆಯನ್ನು ಜಮಾ ಮಾಡಿಕೊಳ್ಳಬೇಕು. ಡೈರೆಕ್ಟ್ ಈಶ್ವರೀಯ ಸೇವೆಯಲ್ಲಿ ಎಲ್ಲವನ್ನೂ ಸಫಲ ಮಾಡಿಕೊಳ್ಳಬೇಕಾಗಿದೆ. ನಿಮಿತ್ತರಾಗಿ ಶಿವತಂದೆಯ ಹೆಸರಿನ ಮೇಲೆ ಸೇವೆ ಮಾಡಬೇಕಾಗಿದೆ.

2. ನೆನಪಿನಲ್ಲಿ ಎಷ್ಟು ಸಮಯ ಕುಳಿತುಕೊಳ್ಳುತ್ತೀರೋ ಅಷ್ಟು ಬುದ್ಧಿಯು ಎಲ್ಲೆಲ್ಲಿಗೆ ಹೋಯಿತೆಂದು ಪರಿಶೀಲನೆ ಮಾಡಿಕೊಳ್ಳಬೇಕಾಗಿದೆ. ತಮ್ಮ ಸತ್ಯ-ಸತ್ಯವಾದ ಲೆಕ್ಕವನ್ನಿಡಬೇಕಾಗಿದೆ. ನರನಿಂದ ನಾರಾಯಣರಾಗಲು ತಂದೆ ಮತ್ತು ಆಸ್ತಿಯನ್ನು ನೆನಪು ಮಾಡಬೇಕಾಗಿದೆ.

ವರದಾನ: ವಿಸ್ಮೃತಿಯ ಪ್ರಪಂಚದಿಂದ ಹೊರ ಬಂದು ಸ್ಮೃತಿ ಸ್ವರೂಪರಾಗಿರುತ್ತಾ ಹೀರೋ ಪಾತ್ರ ಅಭಿನಯಿಸುವಂತಹ ವಿಶೇಷ ಆತ್ಮ ಭವ.

ಈ ಸಂಗಮಯುಗ ಸ್ಮೃತಿಯ ಯುಗವಾಗಿದೆ ಮತ್ತು ಕಲಿಯುಗ ವಿಸ್ಮೃತಿಯ ಯುಗವಾಗಿದೆ. ನೀವೆಲ್ಲರೂ ವಿಸ್ಮೃತಿಯ ಜಗತ್ತಿನಿಂದ ಹೊರ ಬನ್ನಿರಿ.. ಯಾರು ಸ್ಮೃತಿ ಸ್ವರೂಪರಾಗಿದ್ದಾರೆ ಅವರೇ ಹೀರೋ ಪಾತ್ರ ಅಭಿನಯಿಸುವಂತಹ ವಿಶೇಷ ಆತ್ಮರಾಗಿದ್ದಾರೆ. ಈ ಸಮಯದಲ್ಲಿ ಡಬಲ್ ಹೀರೋ ಆಗಿರುವಿರಿ, ಒಂದು ವಜ್ರ ಸಮಾನ ಬೆಲೆ ಬಾಳುವವರಾಗಿರುವಿರಿ, ಇನ್ನೊಂದು ಹೀರೋ ಪಾತ್ರವಾಗಿದೆ. ಆದ್ದರಿಂದ ಈ ಹೃದಯದ ಗೀತೆ ಸದಾ ನುಡಿಯುತ್ತಿರಲಿ ವಾಹ್ ನನ್ನ ಶ್ರೇಷ್ಠ ಭಾಗ್ಯ. ಹೇಗೆ ದೇಹದ ವೃತ್ತಿ ನೆನಪಿನಲ್ಲಿರುವುದು ಅದೇ ರೀತಿ ಈ ಅವಿನಾಶಿ ವೃತ್ತಿಯಾದ “ನಾನು ಶ್ರೇಷ್ಠ ಆತ್ಮನಾಗಿದ್ದೇನೆ”ಎನ್ನುವುದು ನೆನಪಿನಲ್ಲಿರಲಿ. ಆಗ ಹೇಳಲಾಗುವುದು ವಿಶೇಷ ಆತ್ಮ.

ಸ್ಲೋಗನ್: ಸಾಹಸದ ಮೊದಲನೇ ಹೆಜ್ಜೆ ಮುಂದಿಡಿ, ಆಗ ತಂದೆಯ ಸಂಪೂರ್ಣ ಸಹಯೋಗ ಸಿಗುವುದು.